ಸಂತಸದಾಯಕ ಕಲಿಕೆಯ ಮೂಲಕ ಸಾಕ್ಷರತೆಯ ಸಾಧನೆ

ಇಂದಿರಾ ವಿಜಯಸಿಂಹ

ದಕ್ಷಿಣ ಒಡಿಶಾದ ರಾಯಗಢ ಜಿಲ್ಲೆಯ ತಲುಪಲು ದುರ್ಗಮವಾದ ಕೊಂಪೆಯಲ್ಲಿ ಕಾಶೀಪುರ ಎಂಬ ಪ್ರಶಾಂತವಾದ ಗ್ರಾಮವಿದೆ. ಸೌಮ್ಯವಾದ ಅಲೆಯಲೆಯಂತಿರುವ ಬೆಟ್ಟಗಳು, ನದಿಗಳಿಂದ ಸುತ್ತುವರೆದ ಗ್ರಾಮದ ಪರಿಸರ ಒಂದು ಪರಿಪೂರ್ಣ ಚಿತ್ರದಂತಿದೆ. ಚಿತ್ತನೆಯಾದ ಚೌಕುಳ ಗದ್ದೆಗಳಿಂದ ಕೂಡಿದ ಬೆಟ್ಟದ ತಪ್ಪಲು ಬಣ್ಣಬಣ್ಣದ ಹೊದಿಕೆ ಹೊದ್ದಂತೆ, ಪ್ರಕೃತಿಯಲ್ಲಿ ಹಸಿರಿನ ವಿವಿಧ ಛಾಯೆಗಳು ನೋಡುಗನನ್ನು ಬೆರಗುಗೊಳಸುತ್ತವೆ.

ಇಲ್ಲಿನ ಜನರ ಬದುಕಿನ ವಾಸ್ತವಿಕತೆಯೋ, ಸುತ್ತಲಿನ ಪ್ರಕೃತಿಯ ಪರಿಪೂರ್ಣತೆಗೆ ವ್ಯತಿರಿಕ್ತವಾಗಿದೆ. ಸುತ್ತಲಿನ ಬೆಟ್ಟಗಳು ಸಮೃದ್ಧ ಅದಿರಿನ ನಿಕ್ಷೇಪದಿಂದ ಕೂಡಿದ್ದು, ಇದರಿಂದಾಗಿ ಗಣಿಗಾರಿಕೆಯ ಕಂಪನಿಗಳ ಭಾರೀ ಶಬ್ದದ ಯಂತ್ರಗಳು ಹಾಗೂ ಬೃಹದಾಕಾರದ ಲಾರಿಗಳು ಇತ್ತ ಬಂದಿವೆ. ಗ್ರಾಮದಲ್ಲಿ ಬಹುತೇಕ ಬುಡಕಟ್ಟು ಜನರೇ ಇದ್ದು, ಅತೀವ ಬಡತನವನ್ನು ಎದುರಿಸುತ್ತಿದ್ದಾರೆ. ಇಲ್ಲಿನ ಜನರು ವಸಾಹತುಶಾಹಿ ಆಡಳಿತಗಾರರು ಹಾಗೂ ವಸಾಹತೋತ್ತರ ಆಡಳಿತಗಾರರ ಶೋಷಣೆಯ ಜೊತೆಗೆ ಮಲೇರಿಯಾದಂತಹ ಸಾಂಕ್ರಾಮಿಕ ರೋಗಕ್ಕೆ ಸಿಲುಕಿ ನಲುಗಿದ್ದಾರೆ. ಸಾಕ್ಷರತೆಯ ಪ್ರಮಾಣವು ಅಲ್ಪವಾಗಿದ್ದು, ಸುಮಾರು ಮೂವತ್ತು ವರ್ಷಗಳ ಹಿಂದೆ ಇಲ್ಲಿ ಯಾವುದೇ ರೀತಿಯ ಶಾಲೆಗಳೇ ಇರಲಿಲ್ಲ. **ಅಗ್ರಗಾಮೀ** ಸಂಘಟನೆಯು ಈ ಗ್ರಾಮದಲ್ಲಿ ತಳಮಟ್ಟದಲ್ಲೇ ಸಕ್ರಿಯವಾಗಿದ್ದು, ಇಲ್ಲಿನ ಸಮುದಾಯಗಳೊಂದಿಗೆ ಕೈಜೋಡಿಸಿ ಅವರಿಗೆ ತಮ್ಮ ಹಕ್ಕುಗಳನ್ನು ಖಾತ್ರಿಪಡಿಸುವ ಮತ್ತು ಶೋಷಣೆಯ ವಿರುದ್ಧ ಅವರನ್ನು ಸಬಲರನ್ನಾಗಿ ಮಾಡುವ ಗುರಿಯನ್ನು ಹೊಂದಿದೆ. ಸರ್ಕಾರವು ಈ ಪ್ರದೇಶದಲ್ಲಿ ಶಾಲೆಗಳನ್ನು ಪ್ರಾರಂಭಿಸುವ ಮೊದಲೇ **ಅಗ್ರಗಾಮಿ**ಯು ಕಾಶೀಪುರದ ಸುತ್ತಮುತ್ತಲಿನ ಗ್ರಾಮಗಳ ಹಾಡಿಗಳಲ್ಲಿ ರಾತ್ರಿ ಶಾಲೆಗಳನ್ನು ತೆರೆದಿತ್ತು; ಇಂದಿಗೂ ಈ ಶಾಲೆಗಳಲ್ಲಿ ಓದಲು, ಬರೆಯಲು ಕಲಿತ ಹದಿಹರೆಯದ ಯುವಕ, ಯುವತಿಯರು ಆ ದಿನಗಳ ಅಸಾಧಾರಣ ಸಂಭ್ರಮ, ಸಡಗರಗಳನ್ನು ಮೆಲುಕುಹಾಕುತ್ತಾರೆ. ಕೊನೆಗೂ ಸರ್ಕಾರವು ಇಲ್ಲಿನ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಜವಾಬ್ದಾರಿಯನ್ನು ವಹಿಸಿಕೊಂಡ ಬಳಿಕ **ಅಗ್ರಗಾಮಿ**ಯು ಜನರ ಜೀವನೋಪಾಯ ಹಾಗೂ ಆರೋಗ್ಯ ಸಮಸ್ಯೆಗಳತ್ತ ತನ್ನ ಗಮನವನ್ನು ಕೇಂದ್ರೀಕರಿಸಲು ನಿರ್ಧರಿಸಿತು. ಇಲ್ಲಿ ಶಾಲೆಗಳಿದ್ದರೂ ಕೂಡಾ ಮಕ್ಕಳು ಬಹುಬೇಗನೆ ಶಾಲೆ ತೊರೆಯುತ್ತಿದ್ದು, ತಲೆತಲಾಂತರಗಳ ಅನಕ್ಷರತೆ ಮತ್ತು ಬಡತನದಿಂದಾಗಿ ಇಲ್ಲಿನ ಹೆಣ್ಣುಮಕ್ಕಳು ಅತ್ಯಂತ ಶೋಚನೀಯ ಸ್ಥಿತಿಯಲ್ಲಿದ್ದಾರೆ ಎಂಬ ವಿಷಾದಕರ ಸಂಗತಿಯನ್ನು ಅವರು ಕಂಡುಕೊಂಡರು. ಸುಮಾರು ಹದಿನೈದು ವರ್ಷಗಳ ಹಿಂದೆ, **ಅಗ್ರಗಾಮಿ**ಯು ಹೆಣ್ಣುಮಕ್ಕಳಿಗಾಗಿ ಮುಕ್ತಜ್ಞಾನ ಕುಟೀರ (Mukta Gyana Kutir-MGK) ಎಂಬ ಒಂದು ಪ್ರಾಥಮಿಕ ಶಾಲೆಯನ್ನು ಆರಂಭಿಸಿತು.

ಆವಿಷ್ಕಾರದ ಅಗತ್ಯತೆ

ಬೇರೆ ಕಡೆಗಳಂತೆ **ಅಗ್ರಗಾಮಿ** ಶಾಲೆಯಲ್ಲಿಯೂ ಶಿಕ್ಷಕರು ಸಾಂಪ್ರದಾಯಿಕ ಬೋಧನಕ್ರಮವನ್ನು ಅನುಸರಿಸುತ್ತಿದ್ದರು. ಮೊದಲು ಅಕ್ಷರಗಳ ಬಗ್ಗೆ ಗಮನಹರಿಸಿ, ಬಳಿಕ ಪಠ್ಯಪುಸ್ತಕಗಳನ್ನು ಜೋರಾಗಿ ಓದುತ್ತಿದ್ದರು, ಶಿಕ್ಷಕರನ್ನು ಅನುಸರಿಸಿ ಮಕ್ಕಳು ಅವನ್ನು ಪುನರುಚ್ಚರಿಸುತ್ತಿದ್ದರು. ಇದನ್ನು ನೋಡಿದ **ಅಗ್ರಗಾಮಿ**ಯ ಜಂಟಿ ನಿರ್ದೇಶಕಿ ವಿದ್ಯಾ ದಾಸ್ ಅವರು ಬೇಸರ ವ್ಯಕ್ತಪಡಿಸಿದರು. ಇದನ್ನು "ಶಿಕ್ಷಕರ ಬೇಸರ ತರಿಸುವ ಧ್ವನಿಯ ಮುಸುಕಿನಡಿ ಮಕ್ಕಳ ಸೃಜನಶೀಲ ಸಾಮರ್ಥ್ಯವು ಉಸಿರುಗಟ್ಟುತ್ತಿತ್ತು" ಎಂದು ಅವರು ವಿವರಿಸಿದ್ದಾರೆ. ಮುಂದುವರಿದು ಅವರು, "...ಶಾಲಾ ಶಿಕ್ಷಣದಲ್ಲಿ ಮಕ್ಕಳಿಗೆ ಅವರ ಬುದ್ಧಿಮತ್ತೆ ಹಾಗೂ ಗ್ರಹಣಶಕ್ತಿ ಸಾಮರ್ಥ್ಯಗಳನ್ನು ಸೃಜನಾತ್ಮಕ ಮತ್ತು ಆಸಕ್ತಿದಾಯಕ ರೀತಿಗಳಲ್ಲಿ ಬಳಸಿಕೊಳ್ಳಲು ಅವಕಾಶ ಮತ್ತು ಪ್ರೋತ್ಸಾಹವನ್ನು ನೀಡದೇ, ಯಾಂತ್ರಿಕ ಕಂಠಪಾಠಕ್ಕೆ ಅತಿಯಾದ ಒತ್ತು ನೀಡುತ್ತಿದ್ದರೆ, ಇದು ಮಕ್ಕಳ ಮಾನಸಿಕ ಬೆಳವಣಿಗೆಯ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಇದರಿಂದ ಆಸಕ್ತಿಯು ಕಡಿಮೆಯಾಗಿ, ಕಲಿಕೆಯ ವೇಗ ಕುಂಠಿತವಾಗುತ್ತದೆ. ಹೀಗಾದಾಗ, ಮೂಲ ಸಾಕ್ಷರತಾ ಕೌಶಲಗಳನ್ನು ಗಳಿಸಲು ಮಕ್ಕಳಿಗೆ ಸಾಮಾನ್ಯಕ್ಕಿಂತ ಎರಡರಷ್ಟು ಹೆಚ್ಚು ಸಮಯ ಬೇಕಾಗುತ್ತದೆ' ಎನ್ನುತ್ತಾರೆ (**ಅಗ್ರಗಾಮೀ**, ವಾರ್ಷಿಕ ವರದಿ, 2016–17).

ವಿದ್ಯಾ ದಾಸ್ ಅವರ ಈ ಕಾಳಜಿಯು "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ" (Creative Language Development Effort) ಅಥವಾ ಸಿ.ಎಲ್.ಡಿ.ಇ. ಎಂಬ ಸಾಕ್ಷರತೆಯನ್ನು ಬೋಧಿಸುವ ಒಂದು ಹೊಸ ವಿಭಿನ್ನ ವಿಧಾನದ ಆವಿಷ್ಕಾರಕ್ಕೆ ಕಾರಣವಾಯಿತು. ಈ ವಿಧಾನದಲ್ಲಿ ಸಾಂಪ್ರದಾಯಿಕ ಪ್ರಕ್ರಿಯೆಯನ್ನು ಕೈಬಿಟ್ಟು, ಹೆಚ್ಚು ಮಗು ಕೇಂದ್ರಿತವಾದ ಮತ್ತು ಸಮಗ್ರ ಭಾಷಾವಿಧಾನವನ್ನು ಕೈಗೆತ್ತಿಕೊಳ್ಳಲಾಯಿತು. ಈ ವಿಧಾನದಲ್ಲಿ ಮಕ್ಕಳಿಗೆ ಆಗಲೇ ತಿಳಿದಿರುವ ಪದಗಳು, ವಸ್ತುಗಳು, ನಾಮಪದಗಳು, ಅವರು ಸುಲಭವಾಗಿ ನೆನಪಿನಲ್ಲಿಡಬಹುದಾದ ವಿನೋದವಾದ ಪ್ರಾಸಬದ್ಧ ಶಿಶುಗೀತೆಗಳು ಮತ್ತು ಹಾಡುಗಳ ಮೂಲಕ ಶಬ್ದೋಚ್ಚಾರಣೆಯ ಗ್ರಹಿಕೆಯನ್ನು ಮಕ್ಕಳಿಗೆ ದಾಟಿಸಲಾಗುತ್ತದೆ. ಈ ರೀತಿಯ ಕಲಿಕೆಯು ಹೆಚ್ಚು ಸಹಜವಾದ್ದರಿಂದ ಶೀಘ್ರ ಫಲಪ್ರದವೂ ಆಗಿ, ಮಗು ಹಾಗು ಶಿಕ್ಷಕರ ಮೇಲಿನ ಒತ್ತಡ ಕಡಿಮೆಯಾಗುತ್ತದೆ.

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ" (ಸಿ.ಎಲ್.ಡಿ.ಇ.) ಎಂದರೇನು?

"ಮುಕ್ತ ಜ್ಞಾನ ಕುಟೀರ" ಶಾಲೆಯಲ್ಲಿನ ಮಾದರಿಯನ್ನು ಆಧರಿಸಿ ಅಭಿವೃದ್ಧಿಗೊಳಿಸಿದ ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನವು ಬುಡಕಟ್ಟು ಜಿಲ್ಲೆಗಳ ಸರ್ಕಾರಿ ಶಾಲೆಗಳಲ್ಲಿ ಸಾಕ್ಷರತಾ ಕಾರ್ಯಕ್ರಮವನ್ನು ಬಲಪಡಿಸಲು ಮಾಡಿದ ಒಂದು ಪ್ರಯತ್ನವಾಗಿತ್ತು. ಒಡಿಶಾದ ಬುಡಕಟ್ಟು ಜಿಲ್ಲೆಗಳಲ್ಲಿ ಶಾಲೆಗೆ ತೆರಳುವ ಮೊದಲ ತಲೆಮಾರಿನ ಮಕ್ಕಳ ಓದು ಹಾಗೂ ಭಾಷಾ ಸಾಮರ್ಥ್ಯಗಳನ್ನು ಸುಧಾರಿಸುವುದೇ ಇದರ ಗುರಿಯಾಗಿತ್ತು. ಇಲ್ಲಿನ ಸಮುದಾಯಕ್ಕೆ ಶಾಲಾಶಿಕ್ಷಣ ಅಥವಾ ಸಾಕ್ಷರತೆಗಳ

ಗಂಧವೇ ಇರಲಿಲ್ಲ. ಈ ವಿಭಾಗದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಅರ್ಹತೆಗಳು ಕಳಪೆಯಾಗಿದ್ದು, ಅವರಿಗೆ ಕಲಿಕಾ ಪ್ರೇರಣೆಯೂ ನಿರೀಕ್ಷಿತ ಮಟ್ಟದಲ್ಲಿರಲಿಲ್ಲ. ಇದರಿಂದಾಗಿ, ಪ್ರಾಥಮಿಕ ಶಿಕ್ಷಣ ಮುಗಿಸುವ ಬಹುತೇಕ ಮಕ್ಕಳು ಓದುವ ಕೌಶಲವನ್ನೇ ಪಡೆಯದೆ ಹೋಗುತ್ತಿದ್ದರು. "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ವಿಧಾನವು ಅನೇಕ ಅನನ್ಯ ಲಕ್ಷಣಗಳನ್ನು ಒಳಗೊಂಡಿದೆ. ವರ್ಣಮಾಲೆ ಕೇಂದ್ರಿತ ಕಲಿಕಾ ವಿಧಾನದ ಬದಲಾಗಿ ಅಂತರ್ಬೋಧೆಯ ಸಾಕ್ಷರತಾ ಕಲಿಕೆಯ ಮೂಲಕ ಸಹಜ ಭಾಷಾ ಕಲಿಕೆಗೆ ಈ ವಿಧಾನವು ಒತ್ತು ಕೊಡುತ್ತದೆ. ಈ ವಿಧಾನವು, ಕುಟುಂಬ ಮತ್ತು ಮನೆ, ಪರಿಚಿತ ವಸ್ತುಗಳು, ಶಿಶುಗೀತೆಗಳು ಹಾಗೂ ಕಥೆಗಳಿಂದ ಆರಂಭಿಸಿ ಅರ್ಥಪೂರ್ಣ ಪದಗಳು, ವಾಕ್ಯಗಳು, ಮತ್ತು ವಿಚಾರಗಳ ಮೂಲಕ ಮಕ್ಕಳನ್ನು ಲಿಖಿತ ಭಾಷೆಗೆ ಪರಿಚಯಿಸಿ, ಅದರಲ್ಲೇ ಮಗ್ನರಾಗುವಂತೆ ಮಾಡುವ ಮೂಲಕ ಮಕ್ಕಳು ಓದುವ ಉಚ್ಚಾರಣೆಯನ್ನು ಕಲಿಯಲು ಸಜ್ಜುಗೊಳಿಸುತ್ತದೆ. ಮಕ್ಕಳನ್ನು ಬರೆಯಲು ಪ್ರೋತ್ಸಾಹಿಸುವುದರಿಂದ ಅಕ್ಷರಗಳಿಗೂ ಪದದ ಶಬ್ದಕ್ಕೂ ನಡುವೆ ಇರುವ ಸಂಬಂಧಗಳನ್ನು ಸ್ಥಾಪಿಸಲಾಗುತ್ತದೆ. ಹೀಗೆ, ಓದುವುದು, ಬರೆಯುವುದು ಹಾಗೂ ಸಾಕ್ಷರತಾ ಬೆಳವಣಿಗೆಗಳು ಒಂದಕ್ಕೊಂದು ಪೂರಕವಾಗಿ ಸಾಗುತ್ತವೆ. ಈ ಕಾರ್ಯಕ್ರಮವು ಸಾಕ್ಷರತೆ ಹಾಗೂ ಓದುವಿಕೆ ಬೆಳವಣಿಗೆಯ ಅನನ್ಯ ರಚನಾತ್ಮಕ ಮಾದರಿಯನ್ನು ಆಧರಿಸಿದೆ.

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ಹಂತಗಳು

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ವು ಮಕ್ಕಳ ಪ್ರಾಥಮಿಕ ಭಾಷಾ ಹಾಗೂ ಕಲಿಕಾ ಸಾಮರ್ಥ್ಯಗಳ ಆಧಾರದಲ್ಲಿ ರಚಿಸಲಾಗಿದೆ. ಮಕ್ಕಳು ತಮ್ಮ ಆರನೇ ವಯಸ್ಸಿಗೆ ಔಪಚಾರಿಕ ಶಾಲಾ ಶಿಕ್ಷಣಕ್ಕೆ ಪ್ರವೇಶಿಸುವ ಹೊತ್ತಿಗೆ ಅವರಿಗೆ, ಕಡಿಮೆ ಎಂದರೂ, ಒಂದು ಭಾಷೆಯಾದರೂ ತಿಳಿದಿರುತ್ತದೆ. ಮಕ್ಕಳು ತಮ್ಮ ಆರನೇ ವಯಸ್ಸಿಗೆ ಸುಮಾರು 2000ಕ್ಕೂ ಹೆಚ್ಚು ಪದಗಳನ್ನು ಬಳಸುವುದಲ್ಲದೇ, ಅದಕ್ಕಿಂತಲೂ ಹೆಚ್ಚು ಪದಗಳನ್ನು ಅರ್ಥಮಾಡಿಕೊಳ್ಳಬಲ್ಲರು ಎಂದು ಸಂಶೋಧನೆಗಳು ಹೇಳುತ್ತವೆ. ಅವರು ಸಂಪೂರ್ಣ ವಾಕ್ಯಗಳಲ್ಲಿ ತಮ್ಮನ್ನು ಅಭಿವ್ಯಕ್ತಿಸಬಲ್ಲರು. ಯಾವುದಾದರೂ ಒಂದು ಘಟನೆಯ ಬಗ್ಗೆ ಮಾತನಾಡಬಲ್ಲರು ಅಥವಾ ಕಥೆಗಳನ್ನು ಹೇಳಬಲ್ಲರು. ಮಾತಿನ ಪದಗಳ ಮೂಲಕ ಮಕ್ಕಳು ತಮ್ಮ ಜಗತ್ತನ್ನು ಸಕ್ರಿಯವಾಗಿ ಅರ್ಥಮಾಡಿಕೊಳ್ಳಬಲ್ಲರು ಎಂಬುದು ಸಿದ್ಧವಾದ ಬಳಿಕ "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ವು ಲಿಖಿತ ಭಾಷೆಯ ಜಗತ್ತಿಗೆ ಮಕ್ಕಳನ್ನು ಪರಿಚಯಿಸಲು ಪದಗಳೆಡೆಗೆ ಗಮನ ಕೇಂದ್ರೀಕರಿಸುತ್ತದೆ. ಅದಕ್ಕಾಗಿ ಅನುಸರಿಸುವ ಹಂತಗಳು ಇಂತಿವೆ:

- ಅರ್ಥಪೂರ್ಣ ಪದಗಳ ಮೂಲಕ ಅಕ್ಷರಜ್ಞಾನದ ಸೂಚನೆಯನ್ನು ಮೊದಲು ಪ್ರಾರಂಭಿಸುವುದು: ವರ್ಣ–ಮಾಲೆಯ ಅಕ್ಷರಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದರ ಮೂಲಕ ಆರಂಭಿಸುವ ಬದಲು "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದಲ್ಲಿ ಮಕ್ಕಳಿಗೆ ಸಂಪೂರ್ಣ ಪದಗಳನ್ನು ನೇರವಾಗಿ ಪರಿಚಯಿಸಲಾಗುತ್ತದೆ. ಆ ಪದಗಳು ಅವರದೇ ಹೆಸರಾಗಿರಬಹುದು, ಇಲ್ಲವೇ, ಅವರಿಗೆ ಪರಿಚಯವಿರುವ ವಸ್ತುಗಳು, ಪ್ರಾಣಿಗಳು ಮತ್ತು ಪಕ್ಷಿಗಳ ಹೆಸರಾಗಿರಬಹುದು. ಮಗುವಿನ ಮನೆಭಾಷೆಯಲ್ಲಿ ಈ ವಸ್ತು ಅಥವಾ ಪ್ರಾಣಿಯನ್ನು ನಿರ್ದೇಶಿಸುವ ಪದವು ಭಿನ್ನವಾಗಿದ್ದಲ್ಲಿ, ಮಗುವು ಈ ಎರಡು ಪದಗಳೂ ಒಂದೇ ವಸ್ತುವನ್ನು ಅಥವಾ ಒಂದೇ ಅರ್ಥವನ್ನು ನಿರ್ದೇಶಿಸುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಶಿಕ್ಷಕರು ನೆರವಾಗುತ್ತಾರೆ. ಬರವಣಿಗೆಯಲ್ಲಿರುವಂತೆ ಪದವನ್ನು ಉಚ್ಚರಿಸಲು ಮಗುವಿಗೆ ನೆರವಾಗುವುದರ ಜೊತೆಗೆ, ಅದು ತನ್ನ ಮನೆಯ ಆಡುಭಾಷೆಯಲ್ಲಿ ಭಿನ್ನ ಪದವನ್ನು ಬಳಸುತ್ತದೆ ಎಂಬುದನ್ನು ಗುರುತಿಸಲು ಶಿಕ್ಷಕರು ನೆರವಾಗುತ್ತಾರೆ.

- ಮಕ್ಕಳು ಸಂಪೂರ್ಣ ಪದಗಳನ್ನು ಬರೆಯುವುದನ್ನು ಅಭ್ಯಸಿಸಲು ಅವಕಾಶ ಮಾಡಿಕೊಡುವುದು: ಬರವಣಿಗೆಯಲ್ಲಿನ ಪದಗಳನ್ನು ಪರಿಚಯಿಸಿಕೊಳ್ಳುವ ಪ್ರಕ್ರಿಯೆಯ ಅಂಗವಾಗಿ ಮಕ್ಕಳು ತಾವು ಕಲಿತ ಪದಗಳನ್ನು ಬರೆದು ಅಭ್ಯಾಸ ಮಾಡುತ್ತಾರೆ.

- ಆಟ ಹಾಗೂ ಚಟುವಟಿಕೆಗಳ ಮೂಲಕ ಪದಗಳ ಗುರುತಿಸುವಿಕೆಯನ್ನು ಬೆಳೆಸುವುದು: ಮಕ್ಕಳು ಸಂಪೂರ್ಣ ಪದಗಳನ್ನು ಕಲಿಯಲು ಆರಂಭಿಸಿದಾಗ, ಚಿತ್ರಗಳನ್ನು ಪದಗಳೊಂದಿಗೆ ಹೊಂದಿಸುವ, ಖಾಲಿ ಬಿಟ್ಟ ಅಕ್ಷರವನ್ನು ತುಂಬುವ, ಪದ ಹೊಂದಿಸುವ ಹಾಗು ಬಿಂಗೋ ಆಟಗಳಂತಹ ವಿವಿಧ ಆಟಗಳು ಮತ್ತು ಚಟುವಟಿಕೆಗಳ ಮೂಲಕ ಪದಗಳ ಗುರುತಿಸುವಿಕೆಯನ್ನು ಬೆಳೆಸುವುದು.

- ಹಾಡುಗಳು ಹಾಗೂ ಪ್ರಾಸಬದ್ಧ ಶಿಶುಗೀತೆಗಳ ಕಲಿಕೆ: ಮಕ್ಕಳು ಶಿಶುಗೀತೆಗಳನ್ನು ಮತ್ತು ಹಾಡುಗಳನ್ನು ಹಾಡುವುದರಲ್ಲಿ ಖುಷಿ ಅನುಭವಿಸುತ್ತಾರೆ. ಅವರು ತಾವು ಕಲಿತ ಹಾಡುಗಳನ್ನು ಹಾಡುವಾಗ ಅಥವಾ ಪ್ರಾಸಗಳನ್ನು ಒಪ್ಪಿಸುವಾಗ ಲಿಖಿತ–ರೂಪದಲ್ಲಿರುವ ಆ ಹಾಡುಗಳು ಹಾಗು ಶಿಶುಗೀತೆಗಳ ಲಿಖಿತ ರೂಪವನ್ನು ಅವರಿಗೆ ಒದಗಿಸಲಾಗುತ್ತದೆ, ಆದ್ದರಿಂದ ಹಾಡುವಾಗ ಅವರು ಅದನ್ನು ಅನುಸರಿಸಲು ಸಾಧ್ಯವಾಗುತ್ತದೆ. ಅದೇ ಪ್ರಾಸಬದ್ಧ ಶಿಶುಗೀತೆಗಳನ್ನು ಅಥವಾ ಹಾಡನ್ನು ಬೇರೆಬೇರೆ ಭಾಷೆಗಳಿಗೆ ಅನುವಾದಿಸಿ ಕೂಡ ಹಾಡಬಹುದು. ಇದನ್ನು ಮಾಡುವುದರಿಂದ ತಮ್ಮ ಆಡುಭಾಷೆ ಬೇರೆ ಇರುವ ಮಕ್ಕಳೂ ಈ ಪ್ರಕ್ರಿಯೆಯಲ್ಲಿ ಒಳಗೊಂಡ ಭಾವನೆಯನ್ನು ಅನುಭವಿಸುವಂತಾಗುತ್ತದೆ.

- ಕಥೆ ಪುಸ್ತಕಗಳನ್ನು ಪರಿಚಯಿಸುವುದು: ಓದುವ ಹಾಗೂ ಬರವಣಿಗೆಯ ಮೂಲಕ ಮಕ್ಕಳಿಗೆ ಲಿಖಿತ ಪದಗಳ ಪರಿಚಯ ಆಗುತ್ತಿದ್ದಂತೆಯೇ, ಅವುಗಳನ್ನು ಜೋರಾಗಿ ಓದುವುದು ಹಾಗೂ ಪುಸ್ತಕ ಪರಿಚಯಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ನಡೆಸುವುದರ ಮೂಲಕ ಮಕ್ಕಳನ್ನು ಕಥಾಪುಸ್ತಕಗಳ ಲೋಕಕ್ಕೆ ಪರಿಚಯಿಸಲಾಗುತ್ತದೆ.

- ಮಕ್ಕಳು ಬರವಣಿಗೆಯ ಮೂಲಕ ತಮ್ಮನ್ನು ಅಭಿವ್ಯಕ್ತಿಸಲು ಉತ್ತೇಜಿಸುವುದು: "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ವಿಧಾನದಲ್ಲಿ ಓದುವುದು ಮತ್ತು ಬರೆಯುವುದು ಜೊತೆ–ಜೊತೆಯಾಗಿ ಸಾಗುತ್ತದೆ. ತಾವು ಓದಿದ್ದನ್ನು ಹಾಗೂ ತಮ್ಮ ಓದಿಗೆ ಮೀರಿದ್ದನ್ನೂ ಬರೆಯುವಂತೆ ಮಕ್ಕಳನ್ನು ಹುರಿದುಂಬಿಸಲಾಗುತ್ತದೆ.

- ಈಗಾಗಲೇ ಮಕ್ಕಳು ಬಹಳಷ್ಟು ಪೂರ್ಣ ಪದಗಳನ್ನು ಓದಲು ಕಲಿತ ಬಳಿಕ ಅಕ್ಷರ ಮತ್ತು ಮಾತ್ರೆಗಳನ್ನು ಔಪಚಾರಿಕವಾಗಿ ಪರಿಚಯ ಮಾಡಿಕೊಡುವುದು.

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ಬೋಧನಕಲೆ

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದಲ್ಲಿ ಕೈಜೋಡಿಸುವ ಶಿಕ್ಷಕರ ತರಬೇತಿಯ ಭಾಗವಾಗಿ ಭಾಷೆ ಹಾಗೂ ಸಾಕ್ಷರತೆಗಳ ಪರಿಕಲ್ಪನಾತ್ಮಕ ಗ್ರಹಿಕೆಯನ್ನು ಬೆಳೆಸಿಕೊಳ್ಳಲು ಶಿಕ್ಷಕರಿಗೆ ನೆರವು ನೀಡಲಾಗುವುದು. ಸಾಕ್ಷರತೆ ಎಂದರೆ ಸ್ವತಂತ್ರವಾಗಿ ವಿಚಾರಮಾಡುವ ಸಾಮರ್ಥ್ಯ, ತಾವು ಓದಿದುದನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯ ಹಾಗೂ ವಿಚಾರಗಳನ್ನು, ಆಲೋಚನೆಗಳು ಅಥವಾ ಭಾವನೆಗಳನ್ನು ಬರವಣಿಗೆಯ ಮೂಲಕ ದಾಟಿಸುವ ಸಾಮರ್ಥ್ಯವಾಗಿದೆ. "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ವಿಧಾನದಲ್ಲಿ ಅರ್ಥೈಸಿಕೊಳ್ಳುವುದಕ್ಕೆ (Meaning making) ಪ್ರಾಥಮಿಕ ಪಾತ್ರವನ್ನು ನೀಡಲಾಗಿದ್ದು, ಅಕ್ಷರ–ಶಬ್ದಗಳ ಸಂಬಂಧಾತ್ಮಕ ಜ್ಞಾನದ ಪ್ರಯೋಗವನ್ನು ತದನಂತರ ಪರಿಚಯಿಸಲಾಗುತ್ತದೆ. ಭಾಷೆಯ ಸ್ವಭಾವವು ಶಬ್ದ–ಸಂಕೇತದ ವ್ಯವಸ್ಥೆಯಾಗಿದೆ ಎಂಬುದನ್ನು ಶಿಕ್ಷಕರು ಅರ್ಥ–ಮಾಡಿಕೊಳ್ಳಲು ನೆರವು ನೀಡಲಾಗುತ್ತದೆ. ಮಕ್ಕಳು ಸಹಜವಾಗಿ ತಮ್ಮ ಆಡುಭಾಷೆಯನ್ನು ಕರಗತ ಮಾಡಿಕೊಳ್ಳುವ ವಿಧಾನಗಳ ಬಗ್ಗೆ ಅವರು ಚರ್ಚಿಸುತ್ತಾರೆ. ಮಕ್ಕಳನ್ನು ಗಮನಿಸುವ ಮೂಲಕ ಶಿಕ್ಷಕರು ಮಕ್ಕಳ ಕಲಿಕೆಯಲ್ಲಿ ಆಟದ ಮಹತ್ವವನ್ನು ಅರಿಯುತ್ತಾರೆ. "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದಲ್ಲಿ ಕೈಜೋಡಿಸುವ ಶಿಕ್ಷಕರ ಬಗ್ಗೆ ಇರುವ ನಿರೀಕ್ಷೆಗಳೆಂದರೆ:

- ಮಕ್ಕಳನ್ನು ಶಿಕ್ಷಿಸುವುದಾಗಲೀ ಅಥವಾ ನಿಂದಿಸುವುದಾಗಲೀ ಮಾಡದೆ, ಭಯರಹಿತವೂ ಮತ್ತು ಸ್ನೇಹಪೂರ್ಣವೂ ಆದ ವಾತಾವರಣವನ್ನು ನಿರ್ಮಿಸುವುದು.

- ಮಕ್ಕಳು ತಮಗೆ ಹಿತವೆನಿಸುವ ಬಯಸುವ ಭಾಷೆಯಲ್ಲಿ ಮುಕ್ತವಾಗಿ ಮಾತನಾಡುವಂತೆ ಪ್ರೋತ್ಸಾಹಿಸುವುದು. ಶಿಕ್ಷಕರು ಮಗುವಿನ ಆಡುಭಾಷೆಯನ್ನು ಮಾತನಾಡಲು ಬಲ್ಲವರಾದರೂ ಇದರಿಂದ ನೆರವಾಗುತ್ತದೆ. ಶಿಕ್ಷಕರು ಮಕ್ಕಳು ಹೇಳುವುದನ್ನು ಗಮನವಿಟ್ಟು ಕೇಳುವುದು, ಅವರೊಡನೆ ಸ್ನೇಹಪೂರ್ವಕವಾಗಿ ಸಂವಹನ ನಡೆಸುವುದು ಹಾಗೂ ಮಗುವಿನ ಭಾಷೆಯನ್ನು ಅರ್ಥ–ಮಾಡಿಕೊಳ್ಳುವ ಪ್ರಯತ್ನಗಳನ್ನು ಶಿಕ್ಷಕರಿಂದ ನಿರೀಕ್ಷಿಸಲಾಗುತ್ತದೆ.

- "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ವಿಧಾನದ ಹಿಂದಿರುವ ತತ್ತ್ವಗಳು ಹಾಗೂ ಅದನ್ನು ಬೆಂಬಲಿಸುವ ಪುಸ್ತಕಗಳ ಬಗ್ಗೆ ಅರಿವಿರಲಿ. ನೀಡಲಾದ ಮಾರ್ಗಸೂಚಿಗಳಿಗೆ ಅನುಗುಣವಾಗಿ ಪುಸ್ತಕಗಳನ್ನು ಬಳಸಿ.

- ಆಟದ ಮೂಲಕ ಬೋಧನೆ, ಅಭಿನಯದೊಂದಿಗೆ ಹಾಡುಗಳನ್ನು ಕಲಿಯುವುದು ಮತ್ತು ಹಾಡುವುದು, ಚಿತ್ರಕಲೆ ಮತ್ತು ಬಣ್ಣತುಂಬುವ ಚಟುವಟಿಕೆಗಳು, ಓದನ್ನು ಅನುಕರಿಸುವಂತೆ ಮಗುವಿನ ಬೆರಳನ್ನು ಪ್ರಾಸಪದಗಳ ಸಾಲುಗಳ ಮೇಲೆ ನಡೆಸಿಕೊಂಡು ಹೋಗುವುದು (ಅವರಲ್ಲಿ ನಿಜವಾದ ಸಾಮರ್ಥ್ಯ ಇನ್ನೂ ಬೆಳವಣಿಗೆ ಹೊಂದಿಲ್ಲದಿದ್ದರೂ ಕೂಡ) ಹಾಗೂ ಚಿತ್ರಪಟಗಳೊಂದಿಗೆ ಆಟವಾಡಲು ಮಕ್ಕಳಿಗೆ ಅವಕಾಶ ಕಲ್ಪಿಸುವುದು ಸೇರಿದಂತೆ ಆಟದ ಮೂಲಕ ಕಲಿಸುವುದು ಈ ವಿಧಾನಗಳನ್ನು ಬಳಸುವ ಮೂಲಕ ಶಿಕ್ಷಕರು ಮಗುವು ಪಠ್ಯದ ಪರಿಚಯ ಪಡೆಯಲು ಮಾತ್ರವೇ ಅಲ್ಲದೆ, ಅದನ್ನು ಪ್ರಯಾಸವಿಲ್ಲದೆ ನೆನಪಿಟ್ಟುಕೊಳ್ಳಲು ನೆರವಾಗಬಹುದು. ಆಟದೊಂದಿಗೆ ಮಕ್ಕಳು ತಾವು ತಿಳಿದಿರುವುದನ್ನು ಅಭ್ಯಾಸ ಮಾಡುತ್ತಾರಷ್ಟೇ ಅಲ್ಲದೆ, ಹೊಸ ವಿಚಾರಗಳನ್ನೂ ಕಲಿಯುತ್ತಾರೆ. ಮಕ್ಕಳ ಗ್ರಹಣಶಕ್ತಿ–ಸಾಮರ್ಥ್ಯದ ಬೆಳವಣಿಗೆಗೆ ಆಟವು ನಿಜವಾಗಿಯೂ ಸಹಾಯಕಾರಿ ಎಂಬ ಅಂಶವು ಈಗ ಸಂಪೂರ್ಣವಾಗಿ ಅಂಗೀಕೃತವಾಗಿದೆ.

- ಕವನಗಳನ್ನು, ಹಾಡುಗಳನ್ನು ಅಗತ್ಯವಿದ್ದಾಗ ಮತ್ತು ಸಾಧ್ಯವಾದಾಗಲೆಲ್ಲಾ ಮಕ್ಕಳ ಆಡುಭಾಷೆಗೆ ಅನುವಾದ ಮಾಡುವುದು. ಆದರೆ ಒಡಿಶಾ ರಾಜ್ಯದ ಬುಡಕಟ್ಟು ಜನಾಂಗಗಳಲ್ಲಿ ಅನೇಕ ಆಡುಭಾಷೆಗಳು ಚಾಲ್ತಿಯಲ್ಲಿ ಇರುವುದರಿಂದ ಎಲ್ಲಾ ಸಮಯದಲ್ಲೂ ಅನುವಾದಿಸುವುದು ಶಿಕ್ಷಕರಿಗೆ ಸಾಧ್ಯವಾಗುವುದಿಲ್ಲ.

- ಮಕ್ಕಳ ಕಲಿಕೆಗೆ ಪೂರಕವಾಗಿ ಬೋಧನೆ–ಕಲಿಕಾ ಸಾಮಗ್ರಿಗಳನ್ನು ತಯಾರಿಸುವುದು ಮತ್ತು ಬಳಸುವುದು.

- ಕಥೆಗಳನ್ನು ಬಳಸುವುದು, ಜೋರಾಗಿ ಓದುವುದು, ಪಾತ್ರಾಭಿನಯವನ್ನು ಮಾಡುವುದು, ಸಾಹಿತ್ಯದ ಸನ್ನಿವೇಶಗಳಿಗೆ ನಾಟಕದ ರೂಪ ನೀಡುವುದು ಹಾಗೂ ಇದೇ ರೀತಿಯ ಇತರ ಚಟುವಟಿಕೆಗಳನ್ನು ಬಳಸಿಕೊಳ್ಳುವ ಮೂಲಕ ಮಕ್ಕಳಲ್ಲಿ ಪುಸ್ತಕಗಳ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸುವುದು.

- ಶಾಲೆಯ ಸುತ್ತಮುತ್ತಲಿನ ಸಮುದಾಯದೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿರುವುದು.

ಬೆಂಬಲಕ್ಕೆ ಬರುವ ಸಾಮಗ್ರಿಗಳು

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ಕಾರ್ಯಕ್ರಮದಲ್ಲಿ "ಕೌ ಡಕೇ ಕಾ" (ಕಾಗೆ ಕಾ ಎಂದು ಅನ್ನುತ್ತದೆ) ಎಂಬ ವರ್ಕ್ ಬುಕ್ ಹಾಗೂ ಪ್ರಾಥಮಿಕ ಪುಸ್ತಕವು ಮಕ್ಕಳು ಮತ್ತು ಶಿಕ್ಷಕರಿಬ್ಬರಿಗೂ ಅಚ್ಚುಮೆಚ್ಚಿನದಾಗಿದೆ. ಈ ಪುಸ್ತಕದ ಪ್ರಸ್ತಾವನೆಯಲ್ಲಿ "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ವಿಧಾನದ ಹಿಂದಿರುವ ಮೂಲಭೂತ ಪರಿಕಲ್ಪನೆಗಳನ್ನು ವಿವರಿಸಲಾಗಿದೆ. ಈ ಪುಸ್ತಕದಲ್ಲಿ ಚಿತ್ರಬಿಡಿಸುವ ಹಾಗೂ ಬಣ್ಣತುಂಬುವ ಚಟುವಟಿಕೆಗಳ ಪ್ರಾಮುಖ್ಯತೆ, ಮಕ್ಕಳು ಚಿಹ್ನೆಗಳನ್ನು ಸರಿಯಾಗಿ ನಕಲು ತೆಗೆಯುವ ಅಗತ್ಯತೆ, ವಸ್ತುಗಳನ್ನು ಎರಡು ಆಯಾಮದಲ್ಲಿ ಪ್ರತಿನಿಧಿಸುವ ಮಹತ್ವವನ್ನು ಮತ್ತು ಓದಿನ ಬೆಳವಣಿಗೆಯನ್ನು ಹಂತ–ಹಂತವಾಗಿ ವಿವರಿಸಲಾಗಿದೆ. ಇದರೊಂದಿಗೆ, ಶಿಕ್ಷಕರು ತಮ್ಮ ಪಾಠಗಳನ್ನು ಆಯೋಜಿಸಲು ಪ್ರಸ್ತಾವನೆಯು ನೆರವಾಗುತ್ತದಲ್ಲದೆ. ತರಗತಿಯಲ್ಲಿ ಮಾಡಬಹುದಾದ ಚಟುವಟಿಕೆಗಳ ಬಗ್ಗೆ ಅನೇಕ ಸಲಹೆಗಳನ್ನೂ ನೀಡುತ್ತದೆ. "ಕೌ ಡಕೇ ಕಾ" ಜೊತೆಗೆ, ಈ ಕಾರ್ಯಕ್ರಮವು ತರಗತಿಯ ಕಲಿಕೆಗೆ ಜೀವತುಂಬಬಲ್ಲ ಅನೇಕ ಬೋಧನೆ–ಕಲಿಕಾ ಸಾಮಗ್ರಿಗಳನ್ನು ಶಿಕ್ಷಕರಿಗಾಗಿ ಅಭಿವೃದ್ಧಿಗೊಳಿಸಿದೆ.

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ವು ಪರಿಣಾಮ–ಕಾರಿಯಾಗಿದೆಯೇ?

ನೀವೇನಾದರೂ "ಮುಕ್ತ ಜ್ಞಾನ ಕುಟೀರ"ಕ್ಕೆ ಭೇಟಿಯಿತ್ತರೆ ಈ ವಿಧಾನವು ಎಷ್ಟು ಪರಿಣಾಮಕಾರಿಯಾಗಿದೆ ಎಂಬುದು ಮನದಟ್ಟಾಗುವುದು. ನಾನು ಶಾಲೆಗೆ ಭೇಟಿಯಿತ್ತ ಮೊದಲ ಸಂದರ್ಭದಲ್ಲಿ ಶಾಲೆಗೆ ಸೇರಿ ಆರು ತಿಂಗಳೂ ಆಗಿರದ, ತಮ್ಮ ಜೀವನದಲ್ಲೇ ಮೊದಲ ಬಾರಿಗೆ ಶಾಲೆಯ ಮೆಟ್ಟಿಲು ತುಳಿಯುತ್ತಿರುವ

ಒಂದನೇ ತರಗತಿಯ ಮಕ್ಕಳನ್ನು ಮನಸಾರೆ ಮೆಚ್ಚಿಕೊಂಡಿದ್ದೆ. ಜೀವಂತಿಕೆಯಿಂದ ಪುಟಿಯುತ್ತಿದ್ದ ಈ ಪುಟ್ಟ ಹುಡುಗಿಯರು ಕೇಳಿದೊಡನೆಯೇ ಯಾವುದೇ ಹಿಂಜರಿಕೆಯಿಲ್ಲದೆ ಪರಸ್ಪರರ ಹೆಸರುಗಳನ್ನು ಬರೆದುದೇ ಅಲ್ಲದೆ, ನನ್ನ ಹೆಸರನ್ನು ಸಹ ಕೇಳಿದೊಡನೆಯೇ ಬರೆದು ತೋರಿಸಿದರು. ಅವರಲ್ಲಿ ಅನೇಕ ಹುಡುಗಿಯರು ಗ್ರಂಥಾಲಯದಿಂದ ಪುಸ್ತಕಗಳನ್ನು ಆರಿಸಿ ತಂದಿದ್ದು, ಅದರಿಂದ ಓದಿ ಹೇಳಿದರು ಕೂಡ. ಅದೇ, ಬೇರೆ ಶಾಲೆಗಳಲ್ಲಿ ಕಲಿಯುವ ಅನೇಕ ಮಕ್ಕಳು ಏಳನೇ ತರಗತಿ ತಲುಪಿದರೂ ಅವರಿಗೆ ಏಕೆ ಓದಲು ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆ ನನ್ನಲ್ಲಿ ಸುಳಿಯಿತು.

"ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ವನ್ನು ವಿವಿಧ ಬುಡಕಟ್ಟು ಜಿಲ್ಲೆಗಳ 18 ಶಾಲೆಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿದಾಗ ಅದರ ಪ್ರಭಾವವು ಎದ್ದು ಕಾಣುತ್ತಿತ್ತು. ಈ ಶಾಲೆಗಳಿಗೆ ಭೇಟಿ ನೀಡಿದರೆ ನಿಮ್ಮನ್ನು ಸುತ್ತುವರಿಯುವ ಕುತೂಹಲಭರಿತ ಕಣ್ಣಲ್ಲಿ ಭರವಸೆ ಸೂಸುವ ಮಕ್ಕಳನ್ನು ಹಾಗೂ ನಿಮ್ಮೊಡನೆ ಮಾತನಾಡಲು ತವಕಿಸುವ ಮಕ್ಕಳನ್ನು ಎದುರುಗೊಂಡರೆ, ಇದಕ್ಕೆ ವಿರುದ್ಧವಾಗಿ, ಇತರ ಶಾಲೆಗಳಲ್ಲಿ ಸಂದರ್ಶಕರ ಎದುರು ಬಾಯಿಗೆ ಬೀಗ ಜಡಿದಂತೆ ಮೌನವಾಗಿರುವ, ತಪ್ಪಿಸಿಕೊಂಡು ಓಡಿಹೋಗಲು ನೋಡುವ ಮಕ್ಕಳನ್ನು ಕಾಣುತ್ತೀರಿ. ಎಲ್ಲೆಲ್ಲಿ "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ವನ್ನು ವಾಡಿಕೆಯ ಶಾಲಾ ಶಿಕ್ಷಣಕ್ಕೆ ಪೂರಕವಾಗಿ ಪ್ರಯೋಗಿಸ-ಲಾಯಿತೋ ಅಲ್ಲೆಲ್ಲ ಮಕ್ಕಳ ಓದು ಗುರುತಿಸುವ ಮಟ್ಟಿಗೆ ಸುಧಾರಿಸಿತು. ಅಲ್ಲಿಯವರೆಗೆ ಕೆಲವು ಸರಳ ಪದಗಳನ್ನೂ ಓದಲು ಸಾಧ್ಯವಾಗದಂತಹ ದೊಡ್ಡ-ಮಕ್ಕಳಲ್ಲಿಯೂ ಕೂಡಾ ಗಮನಾರ್ಹ ಸುಧಾರಣೆ ಕಂಡು-ಬಂದಿತು. "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ" ಯೋಜನೆಯ ಶಿಕ್ಷಕರಲ್ಲಿ ಒಬ್ಬರಾದ ಈಶ್ವರ ಸೌಂತಾ ಅವರು, ವಸತಿ ಶಾಲೆಯೊಂದರಲ್ಲಿ ಓದುತ್ತಿದ್ದ, ಬಳಿಕ ಶಾಲೆ ತೊರೆದ ಇಬ್ಬರು ಮಕ್ಕಳಲ್ಲಿ ತಾವು ಗಮನಿಸಿದ ಬದಲಾವಣೆಗಳ ಬಗ್ಗೆ ತಿಳಿಸುತ್ತಾರೆ. ಈ ಇಬ್ಬರಿಗೂ ಈಶ್ವರ್ ಅವರ ಶಾಲೆ ಸೇರುವ ಮುನ್ನ ಓದಲು ಸುತಾರಾಂ ಬರುತ್ತಿರಲಿಲ್ಲ. "ಈಗ, ಒಂದು ವರ್ಷದಿಂದ ನನ್ನ ತರಗತಿಯಲ್ಲಿರುವ ಅವರು ನಿರರ್ಗಳವಾಗಿ ಓದಬಲ್ಲವರಾಗಿದ್ದು ಕಲಿಯಲು ಹಪಹಪಿಸುತ್ತಿದ್ದಾರೆ", ಎನ್ನುತ್ತಾರೆ ಈಶ್ವರ್. 18 ಶಾಲೆಗಳಲ್ಲಿ ಹಮ್ಮಿಕೊಳ್ಳಲಾಗಿದ್ದ "ಸೃಜನಾತ್ಮಕ ಭಾಷಾ ಬೆಳವಣಿಗೆಯ ಪ್ರಯತ್ನ"ದ ಪ್ರಯೋಗಾತ್ಮಕ ಯೋಜನೆಯು ಈಗ ಮುಕ್ತಾಯ-ಗೊಂಡಿದ್ದು, ಇದರ ಮೂಲಕ ಮಕ್ಕಳಲ್ಲಿ ಓದಿನ ಹಾಗೂ ಶಾಲಾ ಕಲಿಕೆಯ ಗುಣಾತ್ಮಕ ಧೋರಣೆಯ ಬಗ್ಗೆ ಬಿತ್ತಿದ ಬೀಜವು ಮರವಾಗಿ ಬೆಳೆದು ಫಲನೀಡುವುದೆಂದು ಆಶಿಸೋಣ.

"ಮುಕ್ತ ಜ್ಞಾನ ಕುಟೀರ" ಶಾಲೆಯಲ್ಲಿ ಸಾಕ್ಷರತೆ ಹಾಗೂ ಕಲಿಕೆಗಾಗಿ ಹೂಡಿದ ಭದ್ರಬುನಾದಿಯು ಅನೇಕ ಅನಿರೀಕ್ಷಿತ ಪರಿಣಾಮಗಳನ್ನು ನೀಡಿದೆ. ಅದೊಂದು ಪೂರ್ವಪ್ರಾಥಮಿಕ ಶಾಲೆಯಾಗಿದ್ದು ಅಲ್ಲಿನ ಹುಡುಗಿಯರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಮುಗಿಸಲು ಸರ್ಕಾರಿ ಶಾಲೆಗೆ ಸ್ಥಳಾಂತರಗೊಳ್ಳಬೇಕಾಗುತ್ತದೆ. ಕೆಲವರಿಗೆ ಮಾತ್ರ ಪ್ರಾಥಮಿಕ ಹಂತವನ್ನು ದಾಟಿಹೋಗಲು ಸಾಧ್ಯವಾಗುತ್ತದೆ. ಆದರೆ, "ಮುಕ್ತ ಜ್ಞಾನ ಕುಟೀರ" ಶಾಲೆಯಲ್ಲಿ ಕಟ್ಟಿಕೊಟ್ಟ ಭದ್ರ ಶೈಕ್ಷಣಿಕ ಬುನಾದಿಯು ಅವರ ಸಹಾಯಕ್ಕೆ ಬೇರೆ ರೀತಿಗಳಲ್ಲಿ ಒದಗಿಬರುತ್ತದೆ. ಉದಾಹರಣೆಗೆ, ಒಂದು ಹುಡುಗಿ ಮಾಲೀಕರು ಕೊಟ್ಟ ಅಲ್ಪ ಸಂಬಳವನ್ನು ಎದುರುನೋಡದೇ ಇದ್ದ ಕಾರಣ ಅವರನ್ನು ಪ್ರಶ್ನಿಸಲು ಮುಂದಾದಾಗ, "ಓ, ನೀನು ಶಾಲೆಯ ಮೆಟ್ಟಿಲು ತುಳಿದಿದ್ದೀಯ ಎಂದಾಯಿತು; ಯಾವ ಶಾಲೆ?" ಎಂಬ ಮರುಪ್ರಶ್ನೆಯನ್ನು ಎದುರಿಸಬೇಕಾಯಿತು.

"ಮುಕ್ತ ಜ್ಞಾನ ಕುಟೀರ" ಶಾಲೆಯನ್ನು ಮೂಲತಃ ಆದಿವಾಸಿ ಹುಡುಗಿಯರಿಗಾಗಿ ತೆರೆದಿದ್ದರೂ, ಪಕ್ಕದ ಹಳ್ಳಿಯ ಕುಂಬಾರರು ತಮ್ಮ ಹೆಣ್ಣಮಕ್ಕಳನ್ನು ಈ ಶಾಲೆಗೆ ಕಳುಹಿಸಲು ಮೊದಮೊದಲು ಹಿಂಜರಿದರು. ಆದರೆ, ಆದಿವಾಸಿ ಹುಡುಗಿಯರು "ಮುಕ್ತ ಜ್ಞಾನ ಕುಟೀರ" ಶಾಲೆಯಲ್ಲಿ ಚೆನ್ನಾಗಿ ಕಲಿಯುತ್ತಿದ್ದು, ಅವರಲ್ಲಿ ಕೆಲವರು ನವೋದಯ ಶಾಲೆಗಳ ಮೆಟ್ಟಿಲು ಏರುವಂತಾದುದನ್ನು ಕಂಡ ಕುಂಬಾರರ ಹಳ್ಳಿಯೂ ತನ್ನ ಹೆಣ್ಣುಮಕ್ಕಳನ್ನು "ಮುಕ್ತ ಜ್ಞಾನ ಕುಟೀರ"ಕ್ಕೆ ಕಳುಹಿಸಲು ಮನಸ್ಸುಮಾಡಿತು. ತಲೆತಲಾಂತರದಿಂದ ಬಂದ ಮನಸ್ಥಿತಿಗಳನ್ನು ಬದಲಾಯಿಸಲು ಬಹುಶಃ ಉತ್ತಮ ಶಾಲಾಶಿಕ್ಷಣ ಕಾರಣವಾಗಬಹುದೇನೋ !

ಈ ಲೇಖನವನ್ನು ಮುಗಿಸುವ ಮುನ್ನ ನನ್ನ ಮನ ಮತ್ತೊಮ್ಮೆ ಕಾಶೀಪುರದ ಸೌಮ್ಯ ಬೆಟ್ಟಗಳತ್ತ ಓಡುತ್ತದೆ. ವಾರದ ಪ್ರತಿದಿನವೂ ನೇಸರ ನಿಸರ್ಗವನ್ನು ಬೆಚ್ಚಗಾಗಿಸುವ ಹೊತ್ತಿಗೆ ದನಕರುಗಳು ಮೇಯಲು ಹೊರಡುತ್ತವೆ, ಇದ್ದಕ್ಕಿದ್ದಂತೆ ಮಕ್ಕಳ ನಗುವು ಪರಿಸರವನ್ನು ತೀಡುತ್ತದೆ. ಶಾಲೆಯ ಕಡೆ ಮುಖಮಾಡಿ ಗದ್ದೆಗಳ ನಡುವಿನಿಂದ, ಕಾಡಿನಂಚಿನಿಂದ ಮುಖದೋರುವ ಪುಟ್ಟ ಹುಡುಗಿಯರು ಹೊತ್ತು ತರುವ ನಗು, ಹರಟೆ ಮತ್ತು ಕಲರವಗಳು ಗಾಳಿಯಲ್ಲಿ ತೇಲಿಬರುತ್ತವೆ. ಶಾಲೆಗೆ ಬರುವ ಸಂತಸ, ಕಥೆಗಳನ್ನು ಓದಿ ನಲಿಯುವ ತವಕ, ಕಥೆಗಳನ್ನು ಬರೆದು ಅವುಗಳಿಗೆ ಬಣ್ಣಗಳಿಂದ ಜೀವತುಂಬುವ ಹಿಗ್ಗು ಅವರಲ್ಲಿ ಮನೆಮಾಡಿರುತ್ತದೆ. ಗಾಳಿಯು ಈ ಧ್ವನಿಗಳಿಂದ ತುಂಬಿರುವಂತೆಯೇ, ಅವರ ಶಾಲೆಯ ಗೋಡೆಗಳೂ ಮಕ್ಕಳ ಕಲಾಕೃತಿಗಳಿಂದ, ಬರವಣಿಗೆಗಳಿಂದ ಪ್ರಕಾಶಮಾನವಾಗಿ ಶೋಭಿಸುತ್ತವೆ. "ಮುಕ್ತ ಜ್ಞಾನ ಕುಟೀರ"ಕ್ಕೆ ಭೇಟಿಯಿತ್ತು ಈ ಮಕ್ಕಳು ಅರಳುತ್ತಿರುವುದನ್ನು ನೋಡುವುದೊಂದು ಅನಿರ್ವಚನೀಯ ಅನುಭವ.

ಶಿಕ್ಷಕ ತರಬೇತಿಯ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಇಲ್ಲಿ ಸಂಪರ್ಕಿಸಿ
http://ncert.nic.in/publication/journals/pdf_files/vtte_aug_2018.pdf (pg47 - 58)

ಮುಕ್ತ ಜ್ಞಾನ ಕುಟೀರದ ಕುರಿತ ಲೇಖನಕ್ಕಾಗಿ ಈ ಕೊಂಡಿಯನ್ನು ಕ್ಲಿಕ್ಕಿಸಿ:
https://thewire.in/education/in-odhisa-a-school-quietly-empowers-tribal-girls-with-its-empathetic-vision

---



ಇಂದಿರಾ ಅವರಿಗೆ ಮಾನವನ ಯೋಗಕ್ಷೇಮ ಮತ್ತು ಅದಕ್ಕೆ ಬೆಂಬಲವಾಗಿ ನಿಲ್ಲುವಲ್ಲಿ ಅಥವಾ ಅದಕ್ಕೆ ಕುಂದುತರುವಲ್ಲಿ ಶಿಕ್ಷಣದ ಪಾತ್ರದ ಬಗ್ಗೆ ಗಂಭೀರ ಸ್ವರೂಪದ ಕಾಳಜಿಗಳಿವೆ. ಮಾನವ, ಮಾನವೇತರ ಮತ್ತು ಭೌತಿಕ ವ್ಯವಸ್ಥೆಯಲ್ಲಿ ಎಲ್ಲ ಭಾಗಿದಾರರ ನಡುವೆ ಪರಸ್ಪರ ಬೆಂಬಲಿಸುವ ಹಾಗೂ ಪುಷ್ಟಿಕೊಡುವ ಸಂಬಂಧಗಳ ಜಾಲವಾಗಿ ಅವರು ಯೋಗಕ್ಷೇಮವನ್ನು ಅರ್ಥಮಾಡಿಕೊಂಡಿದ್ದಾರೆ. ಶಿಕ್ಷಕಿಯಾಗಿ, ಶಿಕ್ಷಕರ ತರಬೇತುದಾರರಾಗಿ ಅವರ ಕೈಂಕರ್ಯವು ಶಿಕ್ಷಣಪ್ರಕ್ರಿಯೆಯ ಬಗ್ಗೆ ಆಳವಾದ ಚಿಂತನೆಯನ್ನು ಹುಟ್ಟುಹಾಕಿ ಅವರು ಪರ್ಯಾಯ ಶಾಲೆಯೆಂದು ಗುರುತಿಸಿಕೊಂಡಿರುವ "ಪೂರ್ಣ ಕಲಿಕಾ ಕೇಂದ್ರ"ವನ್ನು ತೆರೆಯುವಂತೆ ಮಾಡಿದೆ. ಇಂದಿರಾ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದು 2020 – ಜನವರಿಯಲ್ಲಿ ನಿವೃತ್ತರಾಗಿದ್ದಾರೆ. ಇಂದಿಗೂ ಪೂರ್ಣ ಶಾಲೆಯ ಚಟುವಟಿಕೆಗಳಲ್ಲಿ ಸಕ್ರಿಯ ಆಸಕ್ತಿ ಇಟ್ಟುಕೊಂಡಿದ್ದಾರೆ. ಇವರ ಅನೇಕ ಲೇಖನಗಳು ಶೈಕ್ಷಣಿಕ ಹಾಗೂ ಜನಪ್ರಿಯ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. ಇವರನ್ನು ಸಂಪರ್ಕಿಸಬಹುದಾದ ಇ–ಮೇಲ್ ವಿಳಾಸ: indira502@gmail.com

ಅನುವಾದ: **ಕುಶಾಲ್ ಬಿ ಎಸ್** । ಪರಿಶೀಲನೆ: **ಲತಾ ಕೆ ಸಿ**

ನಾವು ಭಾರತದ ಬಹುಭಾಷೆಯ ವಾಸ್ತವತೆಯನ್ನೂ ಅರಿತು ಒಪ್ಪಿಕೊಳ್ಳಬೇಕಿದೆ. ಪ್ರತಿಯೊಬ್ಬ ಭಾರತೀಯನು ಮೌಖಿಕ ಉಕ್ತಿಗಳ ಪ್ರಪಂಚದಲ್ಲಿ ಬಹುಭಾಷಿಕನೇ ಆಗಿರುತ್ತಾನೆ. ಬಹುತೇಕ ಮಕ್ಕಳು, ಅವರು ಬೆಳೆದು ಸುತ್ತಲಿನ ಪ್ರಪಂಚದೊಡನೆ ಸಂವಹನ ನಡೆಸುತ್ತಿರುವಾಗ, ಒಂದಲ್ಲಾ ಒಂದು ರೀತಿಯಲ್ಲಿ ವಿಶಿಷ್ಟ ಭಾಷಿಕ ಪ್ರವಾಹಕ್ಕೆ ತೆರೆದುಕೊಳ್ಳುತ್ತಾರೆ. ಮಕ್ಕಳಿಗೆ ಅಕ್ಷರಜ್ಞಾನದ ಭದ್ರಬುನಾದಿಯನ್ನು ನಿರ್ಮಿಸುವ ಸಲುವಾಗಿ ತರಗತಿಗಳಲ್ಲಿ ಮಕ್ಕಳ ಭಾಷೆ ಮತ್ತು ಮಾತುಗಳಿಗೆ ಸಾಕಷ್ಟು ಮುಕ್ತ ಅವಕಾಶವನ್ನು ಸೃಷ್ಟಿಸಬೇಕಾಗುತ್ತದೆ.

ಶಕ್ತಿಬ್ರತಾ ಸೇನ್ ಮತ್ತು ನಿಧಿ ವಿನಾಯಕ್, ವ್ಯಾಪಕ ಸಾಕ್ಷರ ಯೋಜನೆಯ ಅತ್ಯಗತ್ಯ ಆಧಾರ ಸ್ತಂಭಗಳು, ಪು.62